2-3 ದಿವಸಕ್ಕೊಮ್ಮೆ, ವಾರಕ್ಕೊಮ್ಮೆ ಬರುತ್ತಾರೆ. ಮತ್ತು ಕಲವು ಕಡೆ ವೈದ್ಯರುಗಳೇ ಇಲ್ಲ. ಇಂತಹ ಒಂದು ದುರ್ಬಲ ಪರಿಸ್ಥಿತಿ ಇದ್ದಾಗ ನಿಮ್ಮ ಜನಸಂಖ್ಯೆ ಲೆಕ್ಕದ ಪ್ರಕಾರವಾಗಿ ಈಗಾಗಲೇ ಮೂರು ಪ್ರಾಥಮಿಕ ಆರೋಗ್ಯ ಕೇಂದ್ರಗಳು ಬಸವಕಲ್ಯಾಣದಲ್ಲಿ ಹೆಚ್ಚಾಗಿವೆ. ಇನ್ನು 2-3 ಆರೋಗ್ಯ ಕೇಂದ್ರಗಳನ್ನು ಕೊಡಬೇಕೆಂದು ತಾವು ಕೇಳುತ್ತಿದ್ದೀರಿ ಆ ಸಮಸ್ಯೆ ಇಲ್ಲಿ ಎಂದಿದೆ. 30 ಸಾವಿರ ಜನಸಂಖ್ಯೆಯಿರುವ ಕಡೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಕೊಡತಕ್ಕಂಥ ಒಂದು ಪ್ರಮಾಣವಿದೆ.

ಆ ಪ್ರಮಾಣಕ್ಕಿಂತ ಹೆಚ್ಚಾಗಿ ಈಗಾಗಲೇ 3 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಇವೆ. ಇಲ್ಲಿ ಹಚ್ಚಿಗೆ ಕೊಡತಕ್ಕಂಥ ಪ್ರಶ್ನೆ ಬರುವುದಿಲ್ಲ. ಕಾರಣವಷ್ಟೇ ಅನೇಕ ತಾಲ್ಲೂಕುಗಳಿಗೆ ಗ್ರಾಮಾಂತರ ಪ್ರದೇಶದಲ್ಲಿ 40-50 ಸಾವಿರ ಜನಸಂಖ್ಯೆ ಇರುವ ಕಡೆ ಇಲ್ಲ. ಬಳ್ಳಾರಿಯಲ್ಲಿ ಕಲವು ತಾಲ್ಲೂಕುಗಳಲ್ಲಿ 40 ಸಾವಿರ ಜನಸಂಖ್ಯೆಯಿರುವ ಕಡೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವಿಲ್ಲ. ಇದು ಅಂಕಿಸಂಖ್ಯೆಯ ಆಧಾರದ ಮೇಲೆ ಹೇಳುತ್ತಿದ್ದೇನೆ. ಬೀದರ್‌ನ ಕಲವು ತಾಲ್ಲೂಕುಗಳಲ್ಲಿ ಆರೋಗ್ಯ ಕೇಂದ್ರಗಳು ಇಲ್ಲ. ಪರಿಸ್ಥಿತಿಯು ಈ ರೀತಿ ಇದ್ದಾಗ ಇದ್ದ ಸ್ಥಳದಲ್ಲೇ ಹೆಚ್ಚು ಆರೋಗ್ಯ ಕೇಂದ್ರಗಳನ್ನು ಕೊಡತಕ್ಕಂಥ ಪ್ರಮೇಯ ಉದ್ಭವವಾಗುವುದಿಲ್ಲ.

ಸ್ವಚ್ಛಗ್ರಾಮ ಯೋಜನೆ.

314(3057)

ಶ್ರೀ ರಾಜೇಂದ್ರ ವರ್ಮ (ಹುಲಸೂರು): ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ''ಸ್ವಚ್ಛ ಗ್ರಾಮ ಯೋಜನೆ'' ಯನ್ನು ಸರ್ಕಾರ ಜಾರಿಗೊಳಿಸಿರುವುದು ನಿಜವಲ್ಲವೆ; ಹಾಗಿದ್ದಲ್ಲಿ ಈ ಯೋಜನೆಯ ಉದ್ದೇಶಗಳೇನು;

ಆ) ಈ ವರ್ಷದಲ್ಲಿ 1000 ಗ್ರಾಮಗಳನ್ನು ಈ ಯೋಜನೆಯ ವ್ಯಾಪ್ತಿಗೆ ಒಳಪಡಿಸಿರುವುದು ನಿಜವಲ್ಲವೆ;

ಇ) ಹಾಗಿದ್ದಲ್ಲಿ ಈ ಸಂಖ್ಯೆಯ ಗ್ರಾಮಗಳ ಪೈಕಿ ಬೀದರ್ ಜಿಲ್ಲೆಯಲ್ಲಿ ಮತ್ತು ವಿಶೇಷವಾಗಿ ಹುಲಸೂರು ವಿಧಾನಸಭಾ ಕ್ಷೇತ್ರದಲ್ಲಿ ಎಷ್ಟು ಗ್ರಾಮಗಳನ್ನು ಸೇರಿಸಲಾಗುವುದು; (ತಾಲ್ಲೂಕುವಾರು ಅಂಕಿ ಅಂಶಗಳನ್ನು ಒದಗಿಸುವುದು)

ಈ) ಈ ಯೋಜನೆಗಾಗಿ ಈ ವರ್ಷ ಮೆಚ್ಚಿ ಮಾಡಲಾಗುವ ಹಣವೆಷ್ಟು; (ಜಿಲ್ಲಾವಾರು ಅಂಕಿ ಅಂಶಗಳನ್ನು ಒದಗಿಸುವುದು)

ಉ) ಈ ಯೋಜನೆಯಡಿಯಲ್ಲಿ ಹುಲಸೂರು ವಿಧಾನಸಭಾ ಕ್ಷೇತ್ರದಲ್ಲಿ ಮಹಿಳೆಯರಿಗಾಗಿ ಶೌಚಾಲಯ ನಿರ್ಮಿಸುವ ಕಾರ್ಯಕ್ರಮಗಳನ್ನು ಸೇರಿಸಿಕೊಳ್ಳಲಾಗುವುದೇ; ಇಲ್ಲದಿದ್ದಲ್ಲಿ ಕಾರಣಗಳೇನು?

ಶ್ರೀ ಎಂ.ವೈ.ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ''ಸ್ವಚ್ಛ ಗ್ರಾಮ ಯೋಜನೆ ''ಯನ್ನು 2000-2001ನೇ ಸಾಲಿನಿಂದ ಅನುಷ್ಠಾನಗೊಳಿಸಲು ಉದ್ದೇಶಿಸಿದೆ. ಈ ಯೋಜನೆಯಡಿ ತೆಗೆದುಕೊಳ್ಳಲಾಗುವ ಪ್ರತಿಯೊಂದು ಗ್ರಾಮದ ''ಸಂಪೂರ್ಣ ನೈರ್ಮಲೀಕರಣ''ವನ್ನು ಈ ಕೆಳಕಂಡ ಪಂಸೂತ್ರಗಳನ್ನು ಅಳವಡಿಸುವ ಮೂಲಕ ಸಾಧಿಸಲು ಉದ್ದೇಶಿಸಿದೆ.

1. ಗ್ರಾಮದ ಒಳ ರಸ್ತೆ / ಓಣಿಗಳನ್ನು ಸುಧಾರಿಸುವುದು.

2. ಗ್ರಾಮದಿಂದ ಕೊಳೆ / ಮಳೆ ನೀರಿನ ಸಮರ್ಪಕ ವಿಲೇವಾರಿ ಗಾಗಿ ಚರಂಡಿಗಳ ನಿರ್ಮಾಣ.

3. ಗ್ರಾಮದಲ್ಲಿ ವಾಸದ ಮನೆಗಳಿಗೆ ಹತ್ತಿರುವಿರುವ ತಿಪ್ಪೆಗುಂಡಿಗಳನ್ನು ತೆಗೆಯಿಸಿ, ಗ್ರಾಮದ ಹೊರ ವಲಯದಲ್ಲಿ ''ಸಾಮುದಾಯಿಕ ಮಿಶ್ರ ಗೊಬ್ಬರದ ಅಂಗಳ''ವನ್ನು ನಿರ್ಮಿಸುವುದು.

4. ಗ್ರಾಮದ ಪ್ರತಿಯೊಂದು ಮನೆಗೆ ಹೊಗೆರಹಿತ ಒಲೆಯನ್ನು ಒದಗಿಸುವುದು ಮತ್ತು

5. ಗ್ರಾಮದ ಸಂಪೂರ್ಣ ಜನತೆಯ ಅನುಕೂಲಕ್ಕಾಗಿ ಕೌಟುಂಬಿಕ ಶೌಚಾಲಯಗಳು / ಮಹಿಳಾ ಶೌಚಾಲಯ ಸಂಕೀರ್ಣಗಳು / ಶಾಲಾ ಶೌಚಾಲಯಗಳನ್ನು ನಿರ್ಮಿಸುವುದು.

ಆ) ಈ ಯೋಜನೆಯ ರೂಪುರೇಷೆಗಳನ್ನು / ನಿಯಾಮಾವಳಿಗಳನ್ನು ರೂಪಿಸಲಾಗುತ್ತಿದೆ.

ಇ) ಈ ಯೋಜನೆಯ ರೂಪುರೇಷೆಗಳನ್ನು / ನಿಯಾಮಾವಳಿಗಳನ್ನು ರೂಪಿಸಿದ ನಂತರ ಈ ಕುರಿತು ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಈ) ಈ ಯೋಜನೆಯ ಅನುಷ್ಠಾನಕ್ಕಾಗಿ ಪ್ರಸಕ್ತ ಸಾಲಿನಲ್ಲಿ ರೂ.200 ಕೋಟಿ ವೆಚ್ಚ ಮಾಡಲು ಉದ್ದೇಶಿಸಿದೆ.

ಉ) ಈ ಯೋಜನೆಯ ರೂಪುರೇಷೆಗಳನ್ನು / ನಿಯಾಮಾವಳಿಗಳನ್ನು ರೂಪಿಸಿದ ನಂತರ ಈ ಕುರಿತು ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ರಾಜೇಂದ್ರವರ್ಮ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಉತ್ತರವು ನನಗನಿಸಿದ ಮಟ್ಟಿಗೆ ಸರಿಯಿಲ್ಲವೇನೋ ಎಂದು ಅನಿಸುತ್ತದೆ. ಗ್ರಾಮದಲ್ಲಿ ವಾಸದ ಮನೆಗಳಿಗೆ ಹತ್ತಿರವಿರುವ ತಿಪ್ಪೆಗುಂಡಿಗಳನ್ನು ತೆಗೆಸಿ ಗ್ರಾಮದ ಹೊರವಲಯದಲ್ಲಿ ಸಾಮುದಾಯಿಕ ಮಿಶ್ರಗೊಬ್ಬರದ ಅಂಗಳವನ್ನು ನಿರ್ಮಿಸುತ್ತೇವೆ ಎಂದು ಹೇಳುತ್ತಿದ್ದಾರೆ. ಇವತ್ತು ಯಾರು ಗೊಬ್ಬರವನ್ನು ಸರ್ಕಾರಕ್ಕೆ ಕೊಡುತ್ತಾರೆ, ಇವತ್ತು ಪೈವೇಟ್ ತಿಪ್ಪೆಗಳಲ್ಲಿರತಕ್ಕಂತಹ ಕಡೆ ಸಾಮುದಾಯಿಕವಾಗಿ ಗೊಬ್ಬರ ತಯಾರಿಸಲು ಜಾಗವನ್ನು ಏಕೆ ಕೊಡುತ್ತಾರೆ ಎನ್ನುವ ಪ್ರಶ್ನೆ ಇಲ್ಲಿ ಬರುತ್ತದೆ. ಇನ್ನು ಎರಡನೆಯದಾಗಿ ಗ್ರಾಮದ ಪ್ರತಿಯೊಂದು ಮನೆಗೆ ಹೊಗೆರಹಿತ ಒಲೆಯನ್ನು ಒದಗಿಸುತ್ತೇನೆಂದು ಹೇಳುತ್ತಿದ್ದಾರೆ. ಆದರೆ ಅದು ಯಾವ ಕಂಪನಿ ಅದು ಯಾರಿಗೆ ಕೊಡುತ್ತಾರೆ, ಸ್ವಚ್ಛ ಗ್ರಾಮ ಎಂದು ಮೇಲೆ ಆ ಹಣವನ್ನು ನಿಜವಾದಂತಹ ಮೂಲಭೂತ ಸೌಕರ್ಯಗಳಿಗೆ ಈ ಹಣ ಉಪಯೋಗವಾಗುತ್ತದೆಯೇ?

ಶ್ರೀ ಎಂ.ವೈ.ಘೋರ್ಪಡೆ: ಮಾನ್ಯ ಅಧ್ಯಕ್ಷರೆ, ಸ್ವಚ್ಛ ಗ್ರಾಮವೆಂದರೆ, ಅದರಲ್ಲಿ 5 ಅಂಶಗಳನ್ನು ನಾವು ಪ್ರಮುಖವಾಗಿ ಸೇರಿಸಿದ್ದೇವೆ. ಮೊದಲು ಗ್ರಾಮಗಳಲ್ಲಿ ರಸ್ತೆ, ಚರಂಡಿ, ಶೌಚಾಲಯ, ವೈಯಕ್ತಿಕ ಮತ್ತು ಸಾಮೂಹಿಕ ಶಾಲೆಗಳಲ್ಲಿ ಶೌಚಾಲಯ, ಹೊಗೆರಹಿತ ಒಲೆಗಳು, ಇದು ಸುಲಭವಾಗಿ ನಾವು ಮಾಡಬೇಕು ಅದನ್ನು ಮಾಡುತ್ತಿಲ್ಲ. ಗೊಬ್ಬರದ ಗುಂಡಿಗಳನ್ನು ಮಾಡುವುದಕ್ಕೆ ಒಂದು ನಿರ್ದಿಷ್ಟವಾದಂತಹ ಜಾಗವೇಕು. ಈಗ ನಾವು ಹಳ್ಳಿಗಳ ಕಡೆ ಹೋದರೆ ಗೊಬ್ಬರದ ಗುಂಡಿಗಳನ್ನು ಕಾಣುತ್ತೇವೆ. ಅದರ ಬದಲು ಗೊಬ್ಬರವನ್ನು ಇಡುವುದಕ್ಕೆ ಒಂದು ಸ್ಥಳವನ್ನು ಮಾಡಿಕೊಟ್ಟರೆ ಅಲ್ಲಿ ಜನರು ಗೊಬ್ಬರ ಇಡಬಹುದು. ಈ 5 ಅಂಶಗಳನ್ನು ನಾವು ಸಾಧಿಸಲಿಕ್ಕೆ ಅವಕಾಶ ಸಿಕ್ಕರೆ ಸ್ವಚ್ಛ ಗ್ರಾಮವೆಂದು ಹೇಳಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಇದು ಹಿನ್ನಲೆಯಲ್ಲಿರತಕ್ಕಂತಹ ಕಲ್ಪನೆಯಾಗಿದೆ.

ಶ್ರೀ ರಾಜೇಂದ್ರವರ್ಮ: ಈಗ ನಮ್ಮ ಸರ್ಕಾರ ಆಡಳಿತಕ್ಕೆ ಬಂದು 7 ತಿಂಗಳಾಯಿತು, ಮಾನ್ಯ ಮುಖ್ಯಮಂತ್ರಿಗಳು ಈ ಸ್ವಚ್ಛಗ್ರಾಮಕ್ಕೆ 20 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಈ ಮಾತನ್ನು ನಾವು ಹೇಳಿರುವುದಲ್ಲ, ಮಾನ್ಯ ಸಚಿವರು ಬಹಳ ಹಗುರವಾಗಿ ತೆಗೆದುಕೊಳ್ಳುವಂತಹ ಮಾತನ್ನು ಆಡುತ್ತಿದ್ದಾರೆ. ನಮಗೆ ಅವರ ಬಗ್ಗೆ ಬಹಳ ಗೌರವವಿದೆ, ನಮ್ಮ ಕ್ಷೇತ್ರದಲ್ಲಿ ಎಲ್ಲಾ ಊರುಗಳನ್ನು ತೆಗೆದುಕೊಂಡಿದ್ದೀರಿ, ಬೀದರ್ ಜಿಲ್ಲೆಯಲ್ಲಿ ಯಾವಯಾವ ಗ್ರಾಮಗಳನ್ನು ಸ್ವಚ್ಛ ಗ್ರಾಮಕ್ಕೆ ಸಂಬಂಧಪಟ್ಟಂತೆ ಆರಿಸಿಕೊಂಡಿದ್ದೀರಿ ಎಂದು ನಾನು ಕೇಳಿದ್ದೇನೆ. ಆದರೆ ಇವರು ಏನು ಹೇಳುತ್ತಾರೆಂದರೆ, ಅದನ್ನು ನಾವು ಇನ್ನು ಅನುಷ್ಠಾನಕ್ಕೆ ತರಬೇಕು.

ಅದರ ಬಗ್ಗೆ ಇನ್ನು ರೂಪುರೇಷೆಗಳನ್ನು ತಯಾರು ಮಾಡಬೇಕೆಂದು ಹೇಳಿದ್ದಾರೆ. ಆದರೆ ಜೂನ್‌ನಲ್ಲಾಗಲಿ ಅಥವಾ ಮೇ ತಿಂಗಳ ಕೊನೆಯ ವಾರದಲ್ಲಾಗಲಿ, ಈಗ ಮಳೆಗಾಲವು ಪ್ರಾರಂಭವಾಗುವುದರಲ್ಲಿದೆ. ನಮ್ಮ ಕ್ಷೇತ್ರದಲ್ಲಿರುವಂತಹ 28 ಹಳ್ಳಿಗಳಲ್ಲಿ ಓಡಾಡುವುದಕ್ಕೆ ಆಗುವುದಿಲ್ಲ. ಹೀಗಿರುವಾಗ ಯಾವ ರೀತಿ ಶೌಚಾಲಯ ಮಾಡುತ್ತೀರಿ? ತಾವು ಶೌಚಾಲಯದ ಬಗ್ಗೆ ಹೇಳಿದ್ದೀರಿ. ನಮ್ಮ ಹಳ್ಳಿಗಳಲ್ಲಿ ಓಡಾಡಲು ಆಗುವುದಿಲ್ಲ, ಹೀಗಿರುವಾಗ ಶೌಚಾಲಯಕ್ಕೆ ಪೀಗ ಹೋಗಬೇಕು?

12-10 ಪಿ.ಎಂ

ಶ್ರೀ ಎಂ.ಸೈಫುಲ್ಲಾ ಖಾನ್ ಪರ್ಡೆ: ಶೌಚಾಲಯ ಬಗ್ಗೆ ಹೇಳಬೇಕಾದರೆ ಇಂಡಿವಿಜ್ಯುಯಲ್ ಶೌಚಾಲಯ ಮಾಡುವ ಕಾರ್ಯಕ್ರಮ ಇದೆ. ಅದಕ್ಕೆ ಸಬ್ಸಿಡಿ ಕೂಡ ಇದೆ. ಆದರೆ ಎಲ್ಲ ಮನೆಗಳಲ್ಲಿ ಇಂಡಿವಿಜ್ಯುಯಲ್ ಶೌಚಾಲಯ ಇಲ್ಲಿಯವರೆಗೂ ಮಾಡುವುದಕ್ಕೆ ಆಗಿಲ್ಲ. ಶಾಲೆಗಳಲ್ಲಿ ಶೌಚಾಲಯ ಇಲ್ಲ. ಶಾಲೆಗಳಲ್ಲಿ ಶೌಚಾಲಯ ಇರಬೇಕು ಎಂದು ಹೇಳಿ ಅದನ್ನು ಈ ಕಾರ್ಯಕ್ರಮದಲ್ಲಿ ನಾವು ಸೇರಿಸಿದ್ದೇವೆ. ಮತ್ತೆ ಇಂಡಿವಿಜ್ಯುಯಲ್ ಶೌಚಾಲಯ ಅಲ್ಲದೆ ಕಮ್ಯುನಿಟಿ ಶೌಚಾಲಯ ಕೂಡ ಬೇಕಾಗುತ್ತದೆ. ಅಲ್ಲಿ ನೀರಿನ ವ್ಯವಸ್ಥೆ ಬೇಕಾಗುತ್ತದೆ. ಒಂದು ಕುಟುಂಬಕ್ಕೆ ಒಂದು ಶೌಚಾಲಯ ಸಿಗುವಂತಾದರೆ ಅವರು ಸ್ವಚ್ಛವಾಗಿ ಇರುವುದಕ್ಕೆ ಸಾಧ್ಯವಾಗುತ್ತದೆ. ಈ ಪ್ರಯತ್ನ ಕೂಡ ನಾವು ಮಾಡಬೇಕಾಗುತ್ತದೆ. ಶೌಚಾಲಯ ವ್ಯವಸ್ಥೆಯನ್ನು ನಾವು ಮಾಡದೇ ಹೋದರೆ ಇನ್ನೂ 20 ವರ್ಷಗಳಾದರೂ ಕೂಡ ಶೌಚಾಲಯ ರಹಿತವಾದಂಥ ದೇಶ ನಮ್ಮದು ಇರುತ್ತದೆ. ಇದು ಸರಿಯಲ್ಲವೆಂದು ನನಗನ್ನಿಸುತ್ತದೆ. ಇದರ ಬಗ್ಗೆ ನಾವು ವ್ಯಾಪಕವಾದಂಥ, ಆಳವಾದಂಥ ದೃಷ್ಟಿಕೋನವನ್ನು ಇಟ್ಟುಕೊಂಡು ಒಂದು ಸಾಮೂಹಿಕವಾದಂಥ ಪ್ರಯತ್ನ ಸರ್ಕಾರದ ಜೊತೆಗೆ ಈ ಶೌಚಾಲಯದ ವ್ಯವಸ್ಥೆ ಬಗ್ಗೆ ನಡೆಯಬೇಕು ಎಂದು ನನ್ನ ಅಭಿಪ್ರಾಯ.

ಶ್ರೀ ಎ.ರಾಮದಾಸ್: ಪಂಚಸೂತ್ರಗಳಲ್ಲಿ ಮೂರನೇ ಸೂತ್ರದ ಬಗ್ಗೆ ತಾವು ಹೇಳಿದ್ದೀರಿ. ಗ್ರಾಮದಲ್ಲಿ ಇರುವಂಥ ಎಲ್ಲಾ ಮನೆಗಳಲ್ಲಿ ತಿಪ್ಪೆಗುಂಡಿಗಳನ್ನು ಒಂದುಕಡೆ ಮಾಡುವಂಥ ದೃಷ್ಟಿಯಿಂದ ಒಂದು ಪ್ರದೇಶವನ್ನು ನಿಶ್ಚಯ ಮಾಡುತ್ತಿದ್ದೀರಿ ಎಂದರೆ, ಗ್ರಾಮಾಂತರದಲ್ಲಿ ಬರುವಂಥ ಗೊಬ್ಬರವನ್ನು ಆಯಾಯ ಮನೆಯವರು ಸಂಪೂರ್ಣವಾಗಿ ಒಟ್ಟಿಗೆ ತೆಗೆದುಕೊಂಡು ಹೋಗುವುದಕ್ಕೆ ಇದೇನು ಕೋಆಪರೇಟಿವ್ ಸೆಕ್ಟಾರ್‌ನಲ್ಲಿ ಮಾಡುತ್ತಿದ್ದೀರಾ? ಅಥವಾ ಸರ್ಕಾರವೇ ಜವಾಬ್ದಾರಿ ತೆಗೆದುಕೊಳ್ಳುತ್ತದೆಯೇ ಎನ್ನುವುದು ಒಂದು ಪ್ರಶ್ನೆ. ನಾಲ್ಕನೇ ಸೂತ್ರ ತಾವು ಹೇಳಿದ್ದೀರಿ. ಈ ಮನೆಗಳಿಗೆ ಹೊಗೆರಹಿತವಾದಂಥ ಒಲೆಗಳನ್ನು ಕೊಡುತ್ತೇವೆ ಎಂದರೆ ಗ್ಯಾಸ್ ಒಲೆಗಳನ್ನು ನೀವು ಏನಾದರೂ ಕೊಡುತ್ತಿದ್ದೀರೇನು? ಹೊಗೆ ರಹಿತ ಎಂದರೆ ಯಾವ ರೀತಿಯ ವ್ಯವಸ್ಥೆ ಇದೆ? ಈ ಎರಡು ಸೂತ್ರಗಳ ಬಗ್ಗೆ ವಿವರಣೆಯನ್ನು ನಾನು

ಕೇಳುತ್ತಿದ್ದೇನೆ.

ಶ್ರೀ ಎಂ.ವೈ.ಘೋರ್ಪಡೆ: ಮಾನ್ಯ ಅಧ್ಯಕ್ಷರೇ ಶ್ರೀಮತಿ ಇಂದಿರಾಗಾಂಧಿಯವರ ಕಾಲದಿಂದ ಈ ಹೊಗೆರಹಿತ ಒಲೆಗಳ ಬಗ್ಗೆ ಎಲ್ಲರೂ ಮಾತನಾಡುತ್ತಾ ಬಂದಿದ್ದೇವೆ. ಅದಕ್ಕೆ ಹಣದ ಅಭಾವ ಇಲ್ಲ. ಅದಕ್ಕೆ ಜಾಸ್ತಿ ಹಣ ಬೇಕಾಗುವುದಿಲ್ಲ. ಒಂದು ಸಾಮೂಹಿಕವಾದಂಥ ಪ್ರಯತ್ನ ಹಳ್ಳಿಯಲ್ಲಿ ನಡೆಯಬೇಕಾಗುತ್ತದೆ. ಆ ರೀತಿ ಸ್ವಚ್ಚಗ್ರಾಮ ಎಂದು ನಾವು ತೆಗೆದುಕೊಂಡರೆ ಅಂತಹ ಒಂದು ಪ್ರಯತ್ನ ಎಲ್ಲರೂ ಸೇರಿ ಮಾಡುವುದಕ್ಕೆ ಒಂದು ಹೊಸ ಪರಿವರ್ತನೆಯನ್ನು ನಾವು ನಡೆಸಬೇಕಾಗುತ್ತದೆ. ಇಲ್ಲದೇ ಹೋದರೆ ಗ್ರಾಮಗಳು ಹಾಗೆಯೇ ಉಳಿಯುತ್ತವೆ ಮತ್ತು ಜನರಿಗೆ ಮುಟ್ಟವುದಿಲ್ಲ.

ಚಳ್ಳಕೆರೆ ಆಸ್ಪತ್ರೆಗೆ ದಂತ ವೈದ್ಯರ ನೇಮಕ.

315(3068)

ಶ್ರೀ ಬಸವರಾಜ್ ಮಂಡಿಮಠ.ಜಿ.(ಚಳ್ಳಕೆರೆ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಳ್ಳಕೆರೆ ಆಸ್ಪತ್ರೆಯಲ್ಲಿ ಎಂದಿನಿಂದ ಡೆಂಟಿಸ್ಟ್ ಹುದ್ದೆ ಖಾಲಿ ಇದೆ.

ಆ) ಸದರಿ ಹುದ್ದೆ ಭರ್ತಿ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಇ) ಆಸ್ಪತ್ರೆ ಮುಂದಿನ ಆವರಣದಲ್ಲಿ ಸ್ವಚ್ಚತೆ ಕಾಪಾಡುವ ದೃಷ್ಟಿಯಿಂದ ಡಾಂಬರೀಕರಣ ಮಾಡಲು ಸರ್ಕಾರ ಇಚ್ಚಿಸುತ್ತಿದೆಯೇ?

ಈ) ಹಾಗಿದ್ದಲ್ಲಿ ಎಂದು ಡಾಂಬರಿಕರಣ ಮಾಡಲಾಗುವುದು?

ಡಾ:ಎ.ಬಿ.ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) 7 ವರ್ಷಗಳಿಂದ ಖಾಲಿ ಇದೆ.

ಆ) ಸಹಾಯಕ ದಂತ ಶಸ್ತ್ರ ಚಿಕಿತ್ಸಕರ ಹುದ್ದೆಗಳು ನೇರ ನೇಮಕಾತಿ ಮುಖಾಂತರ ತುಂಬಲು ಆದೇಶಿಸಿರುತ್ತದೆ. ಪ್ರಕ್ರಿಯೆ ಪೂರ್ಣಗೊಂಡ ನಂತರ ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಇ) ಹೌದು